IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಜಾನಪದ ರಂಗಭೂಮಿ

**ಕೃಷ್ಣಮೂರ್ತಿ.ಜಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,
ಬೆಂಗಳೂರು, ಭಾರತ - 560057

**Abstract:** ಎಲ್ಲಾ ರೀತಿಯ ಸಾಹಿತಿಕ ಬೆಳವಣಿಗೆ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು ಧರ್ಮ ಮತ್ತು ಸಂಸ್ಕೃತಿಯ ವೈಶಿಷ್ಟ್ಯವೇ ಆಗಿದೆ. ಯಾವುದೇ ಕಲೆಯ ಮೂಲ ಧರ್ಮದ ಪ್ರೇರಣೆಯಾದರೂ ಅದರ ಮುಂದುವರೆದ ಭಾಗ ಮನರಂಜನೆಯಾಗಿರುತ್ತದೆ. ಆರಾಧನೆಯಿಂದ ಪ್ರಾರಂಭವಾದ ಕುಣಿತ ಮುಂದೆ ನಾಟಕ ರೂಪತಳೆದರು ನಾಟಕದ ಅಂಶಗಳು ಅಲ್ಲಿ ಕಾಣಸಿಗುವುದಿಲ್ಲ, ಅಂದರಂತೆ ಪಾತ್ರದಾರಿಗಳ ಪ್ರಜ್ಞಾಪೂರ್ವಕ ನಟನೆಯಿಂದ ಮಾತ್ರ ಅದು ನಾಟಕವಾಗುತ್ತದೆ. ಧಾರ್ಮಿಕ ಆಚರಣೆಯಲ್ಲಿ ಆಚರಣೆಯೇ ಪ್ರಧಾನವಸ್ತುವಾಗಿರುತ್ತದೆ. ನಾಟಕದಲ್ಲಿ ವಸ್ತು, ಪಾತ್ರ, ಸಂಭಾಷಣೆ ಈ ಎಲ್ಲ ಅಂಶಗಳು ನಾಟಕದ ಸ್ವರೂಪವಾಗಿರುತ್ತದೆ. ಆದರೆ ನಾಟಕದ ಹುಟ್ಟು ಮತ್ತು ವಿಕಾಸಕ್ಕೆ ಧಾರ್ಮಿಕ ವಿಧಿ-ವಿಧಾನಗಳು, ಆಚರಣೆ-ಕುಣಿತ ಮತ್ತು ಆರಾಧನೆಯ ವಿಚಾರಗಳೇ ಪ್ರೇರಣೆಯಾಗಿದೆ. ದೇವರರನ್ನು ಆರಾಧಿಸುವ ಮೂಲಕ ಪ್ರಸನ್ನಗೊಳಿಸುವ ಧಾರ್ಮಿಕ ವಿಧಾನಗಳಿಂದ ಬಯಲಾಟಗಳಂತೆ ಅನೇಕ ಪ್ರಾದೇಶಿಕ ವೈವಿಧ್ಯಗಳಾದ ಯಕ್ಷಗಾನ, ದೊಡ್ಡಾಟ, ಸಣ್ಣಾಟ ಮುಂತಾದ ಅನೇಕ ಜನಪದ ನಾಟಕ ಪ್ರಕಾರಗಳು ರೂಪಗೊಂಡಿವೆ. ಈ ಎಲ್ಲ ರೂಪಗಳ ಮೂಲ ಒಂದೇಯಾದರು ಭಿನ್ನತೆಗಳನ್ನು ನಾವು ಇಲ್ಲಿ ಗುರುತಿಸಬಹುದು.

**KEYWORDS**: ಜಾನಪದ ರಂಗಭೂಮಿ, ಕನ್ನಡ ಸಾಹಿತ್ಯ, ಕನ್ನಡ ರಂಗಭೂಮಿ, ಯಕ್ಷಗಾನ, ದೊಡ್ಡಾಟ, ಬಯಲಾಟ, ಬೊಂಬೆಯಾಟ, ತೊಗಲು ಬೊಂಬೆಯಾಟ, ಧಾರ್ಮಿಕ ಆಚರಣೆ, ತಾಳಮದ್ದಳೆ

ಧಾರ್ಮಿಕ ಮುಖೇನ ಸೃಷ್ಟಿಯಾದ ಸಾಹಿತ್ಯ, ಶಿಲ್ಪಕಲೆ, ಸಂಗೀತ ಮೊದಲಾದ ಮಾನವೀಕ ಕಲೆಗಳು ವಿಕಾಸಗೊಂಡಿರುವುದು ಸಾಂಸ್ಕೃತಿಕ ವೈಶಿಷ್ಟ್ಯಗಳಲ್ಲಿ ಒಂದು. ಪ್ರತಿ ಕಲೆ ಹುಟ್ಟಿ ಬೆಳೆಯಬೇಕಾದರೆ ಅದಕ್ಕೆ ಮೂಲ ಕಾರಣ ಧರ್ಮ ಮತ್ತು ಧಾರ್ಮಿಕ ಪ್ರೇರಣೆಗಳೇ ಆಗಿದ್ದರು ಅದೊಂದು ಮನರಂಜನೀಯ ವಿಷಯವಾಗಿ ಪಲ್ಲಟಗೊಳ್ಳುವುದನ್ನು ಗಮನಿಸಬಹುದು. ದೇವರನ್ನು ಪೂಜಿಸುವ ಸಲುವಾಗಿ ಪ್ರಾರಂಭಗೊಂಡ ಕುಣಿತಗಳಲ್ಲಿ ನಾವು ನಾಟಕ ಕುರೂಹುಗಳನ್ನು ಕಾಣಬಹುದಾದರೂ ನಾಟಕವೇ ಎಂದು ಹೇಳಲು ಬೇಕಾದ ಲಕ್ಷಣಗಳನ್ನು ನಾವಲ್ಲಿ ಗುರುತಿಸಲು ಸಾಧ್ಯವಾಗುವುದಿಲ್ಲ. ನಟನೆಯಲ್ಲಿ ನಟ ಅವನ ಪಾತ್ರವನ್ನು ಪ್ರದರ್ಶಿಸುವ ಉದ್ದೇಶವಿದ್ದರೆ ಅದು ನಾಟಕವಾಗುತ್ತದೆ. ಆದರೆ ಧಾರ್ಮಿಕ ಆಚರಣೆಯ ದೃಷ್ಟಿಯಿಂದ ನಡೆಯುವ ಪ್ರತಿ ಕುಣಿತದಲ್ಲಿ ಅದರ ಪ್ರದರ್ಶನ ಎಂಬುದು ತೀರ ಗೌಣ ಮತ್ತು ಆರಾಧನೆ ಎಂಬುದು ಪ್ರದಾನಸ್ಥಾನವನ್ನು ಪಡೆದಿರುತ್ತದೆ. ಅದೇ ರೀತಿ ನಾಟಕದ ಪ್ರದರ್ಶನದಲ್ಲಿ ನಟರ ಉದ್ದೇಶ ನಿಕರವಾಗಿರುತ್ತದೆ ಅದು ನೋಡುಗರನ್ನು ರಂಜಿಸುವುದಾಗಿರುತ್ತದೆ. ನೋಡುನಗನ್ನು ಭಾವಪರವಶಗೊಳಿಸುವುದು ನಾಟಕದ ಉದ್ದೇಶವಾದರೆ ದೇವರನ್ನು ತೃಪ್ತಗೊಳಿಸುವುದು ಧಾರ್ಮಿಕ ಆರಾಧನೆಯ ಮೂಲೋದ್ದೇಶವಾಗಿರುತ್ತದೆ. ಹಾಗೇಯೇ ಪಾತ್ರ, ಸಂದರ್ಭಗಳು ಇತ್ಯಾದಿಗಳು ನಾಟಕದಲ್ಲಿ ಸಾಧ್ಯವಾದರೇ ಇವುಗಳನ್ನು ದೈವಾರಾಧನೆಯಲ್ಲಿ ಹೋಲಿಸಲಾಗದು. ಆದರೆ ನಾಟಕದ ಹುಟ್ಟು ವಿಕಾಸನಕ್ಕೆ ಕಾರಣವಾದ ಧಾರ್ಮಿಕ ವಿಧಿವಿಧಾನಗಳು ಮತ್ತು ದೈವಾರಾಧನೆಯ ಕುಣಿತಗಳನ್ನು ನಮ್ಮ ಜನಪದ ರಂಗಭೂಮಿಯಲ್ಲಿ ಕಾಣಬಹುದಾಗಿದೆ. ಇವುಗಳಿಗೆ ನಿದರ್ಶನವೆಂಬಂತೆ ಬಯಲಾಟಗಳ ಪ್ರಾರಂಭದಲ್ಲಿ ಕಾಣಬಹುದಾದ ದೈವಸ್ತುತಿ ಮತ್ತು ಪೂಜೆಗಳು, ನೃತ್ಯಗಳು ದಾರ್ಮಿಕ ಆಚರಣೆಗಳಿಂದಲೇ ನಾಟಕ ಎಂಬುದು ಪ್ರಾರಂಬವಾಗಿದೆ ಎಂಬುದಕ್ಕೆ ನೇರ ಸಾಕ್ಷಿಗಳಾಗಿವೆ.

ದೈವರಾಧನೆಯ ಮೂಲ ದೇವರನ್ನು ಸಂತೃಪ್ತಗೊಳಿಸುವುದೆ ಆಗಿದೆ. ಬಯಲಾಟದ ಬಣ್ಣ ಹಾಕುವ ಮನೆಯಲ್ಲಿ ಮೊದಲು ಇಷ್ಟದ ದೇವರನ್ನು ಪೂಜಿಸುವದನ್ನು ಕಾಣಬಹುದು. ಪೂರ್ವರಂಗ, ನಿರೂಪಣೆ, ಮಂಗಳ ಮೂರು ಘಟ್ಟಗಳನ್ನು ಬಯಲಾಟದಲ್ಲಿ ಗುರುತಿಸಬಹುದು. ಅದರಂತೆ ಕಥನ ನಿರೂಪಣೆ ಒಂದು ಸನ್ನಿವೇಶದಿಂದ ಮತ್ತೊಂದು ಸನ್ನಿವೇಶಕ್ಕೆ ಬದಲಾಗುತ್ತಾ ನಾಟಕವಾಗಲು ಸಾಧ್ಯವಾಗಿದೆ. ಬಯಲಾಟದ ವಸ್ತು ಪೌರಾಣಿಕವಾದರಿಂದ ಅಲ್ಲಿ ಎಲ್ಲ ಪಾತ್ರಗಳು ದೇವಾನುದೇವತೆಗಳು ಮತ್ತು ಪುರಾಣದಲ್ಲಿ ಕಾಣಬಹುದಾದ ಅನೇಕ ಕಾರಣ ಜನ್ಮ ನಾಯಕರುಗಳು ಆಗಿದ್ದಾರೆ. ಇಲ್ಲಿ ಅನೇಕ ಪವಾಡಬರಿತವಾದ ಯುದ್ದಗಳು ಸೇರಿದರಂತೆ ನೋಡುಗನೊಳಗೊಂದು ಭ್ರಮ ಲೋಕವನ್ನು ಸೃಷ್ಟಿಸಿ ಭಾವಪರವಶನಾಗುವಂತೆ

ಮಾಡುತ್ತದೆ. ಹೀಗೆ ನಾಟಕದಲ್ಲಿ ಮೂಡಿಬರುವ ದೇವರ ಬಗೆಗಿನ ಚಿತ್ರಣಗಳೆಲ್ಲವು ದೈವರಾಧನೆಯ ಒಂದು ಭಾಗವೇ ಆಗಿರುತ್ತದೆ. ಹೀಗೆ ದಾರ್ಮಿಕ ವಿಧಾನಗಳ ಭಾಗವಾಗಿ ಬೆಳೆದು ಬಂದ ಬಯಲಾಟದ ಇತಿಹಾಸವನ್ನು ಗುರುತಿಸಲು ಇತ್ತೀಚಿನ ಪ್ರಯತ್ನಗಳಲ್ಲಿ ಒಂದಾಗಿದೆ.

ಅನೇಕ ರಾಜಮಹಾರಾಜರು ಸೇರಿದಂತೆ ಬ್ರಿಟಿಷರ ಆಳ್ವಿಕೆಗೆ ಒಳಗಾದ ಕನ್ನಡ ಪ್ರಾದೇಶಿಕ ಭಿನ್ನತೆಯನ್ನು ಒಳಗೊಂಡಿದೆ. ಅದರಂತೆ ಬಯಲಾಟದಲ್ಲೂ ಈ ಭಿನ್ನತೆಗಳನ್ನು ಕಾಣಬಹುದು. ಅವು ಯಕ್ಷಗಾನ, ದೊಡ್ಡಾಟ, ಸಣ್ಣಾಟ ಪ್ರಕಾರಗಳು ಒಳಗೊಂಡಿದೆ. ಇವೆಲ್ಲದರ ಮೂಲ ಒಂದೆಯಾದರು ಅನೇಕ ಪ್ರೇರಣೆಗಳಿಂದ ಭಿನ್ನವಾಗಿವೆ.

**ಯಕ್ಷಗಾನ**:

ಕನ್ನಡನಾಡಿನ ವಿಶೇಷಕಲೆಗಳಲ್ಲಿ ಯಕ್ಷಗಾನವೂ ಒಂದು. ಇದರ ಕುರಿತಾದ ಮಾಹಿತಿಗಳು ನಮಗೆ 16ನೇ ಶತಮಾನದಿಂದ ಸಿಗುತ್ತದೆ. ಪಶ್ಚಿಮ ಕರಾವಳಿ ಭಾಗದಲ್ಲಿ ಕಾಣಬಹುದಾದ ಒಂದು ಸಂಪ್ರದಾಯಿಕ ಕಲೆಯಾಗಿದ್ದು ಇದರ ಪ್ರಭಾವವನ್ನು ತೆಲುಗು ಮತ್ತು ತಮಿಳುನಾಡಿನ ನಾಟಕರಂಗಗಳಲ್ಲಿಯೂ ಕಾಣಬಹುದು. ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಭಾಗವೂ ಯಕ್ಷಗಾನದ ತವರು ಎಂದೇ ಹೇಳಬಹುದು. ಈ ಯಕ್ಷಗಾನದಲ್ಲಿ ಅತಿಹೆಚ್ಚಿನದಾಗಿ ವೈಷ್ಣವ ಕಥಾವಸ್ತುಗಳಿರುವುದರಿಂದ ದಶಾವತಾರ, ಭಾಗವತರ ಆಟ ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಯಕ್ಷಗಾನವನ್ನು ವಿಶಾಲ ಜಾಗದ ಮಧ್ಯೆ ನಿರ್ಮಿಸಿರುವ ವೇದಿಕೆಯಲ್ಲಿ ನಡೆಸುತ್ತಾರೆ. ಮೂರು ಭಾಗದಲ್ಲಿ ಜನರು ಕುಳಿತು ನೋಡುವ ಅವಕಾಶ ಇರುತ್ತದೆ. ವೇದಿಕೆ ಮೇಲ್ಭಾಗದಲ್ಲಿ ಭಾಗವತ, ಮದ್ದಳೆ ಮತ್ತು ಸಂಗೀತದವರು ಕುಳಿತುಕೊಳ್ಳುವ ಎತ್ತರವಾದ ಮಂಚವನ್ನು ಸಿದ್ಧಪಡಿಸಿರುತ್ತಾರೆ. ಪಾತ್ರಧಾರಿಗಳು ಭಾಗವತರ ಎಡದಿಂದ ಪ್ರವೇಶವನ್ನು ಪಡೆದು ಬಲದಿಂದ ನಿರ್ಗಮಿಸುತ್ತಾರೆ. ರಂಗಸಜ್ಜಿಕೆಯ ಅಣತಿದೂರದಲ್ಲಿ ನೇಪಥ್ಯದ ಬಣ್ಣದ ಮನೆ ಇರುತ್ತದೆ ಈ ಜಾಗದಲ್ಲಿ ಎಲ್ಲ ಪಾತ್ರದವರು ಅಲಂಕಾರಗಳನ್ನು ಮಾಡಿಕೊಳ್ಳುತ್ತಾರೆ. ಯಕ್ಷಗಾನದ ವೇಷಭೂಷಣಗಳು ಅತಿ ಹೆಚ್ಚು ಪ್ರಭಾವವನ್ನು ಮೀರುವಂತಹು. ಪಾತ್ರಗಳಿಗೆ ಬೇಕಾದ ಮುಖ ಬಣ್ಣ ಮತ್ತು ಅಲಂಕಾರಗಳಿಂದ ಪಾತ್ರದಾರಿಗಳು ಜನರ ಗಮನ ಸೆಳೆಯುತ್ತಾರೆ. ಯಕ್ಷಗಾನದಲ್ಲಿನ ವೇಷಭೂಷಣಗಳು, ಉಡುಗೆ ತೊಡುಗೆಗಳು ವಿಶೇಷವಾಗಿರುತ್ತದೆ. ಯಕ್ಷಗಾನದ ಪ್ರತಿ ಸನ್ನಿವೇಶಗಳು ಒಂದು ಹೊಸ ಲೋಕವನ್ನು ಸೃಷ್ಟಿಸುತ್ತವೆ. ವಿಷ್ಣುವಿನ ಅನೇಕ ಅವತಾರಗಳು, ಪಾಂಡು ಕೌರವರು ಸೇರಿದಂತೆ ಹಲವು ರಾಜರು, ರಾಕ್ಷಸರು, ಋಷಿಮುನಿಗಳು, ಸ್ತ್ರಿ ಪಾತ್ರಗಳು ಎಲ್ಲವೂ ವಿಭಿನ್ನ ಮತ್ತು ವೈವಿಧ್ಯಮಯ ಸೃಷ್ಟಿಗೆ ವೇದಿಕೆಯಾಗಿರುತ್ತವೆ. ಅಯಾ ಪಾತ್ರಗಳ ಸ್ವಭಾವವನ್ನು ಹೋಲುವ ಮುಖ ಬಣ್ಣ ಮತ್ತು ವಸ್ತ್ರಾಲಂಕಾರಗಳು ಮನೋಜ್ಞವಾಗಿರುತ್ತವೆ.

ಯಕ್ಷಗಾನ ಪ್ರದರ್ಶನದ ಪಾತ್ರಗಳ ಮನೋಹರ ನೋಟ ನೋಡುಗರಿಗೆ ಮೋಹಕವಾದದ್ದು. ಮಹತ್ವದ ಪಾತ್ರಗಳು, ರಾಕ್ಷಸ ವೇಷದಾರಿ, ಸ್ತ್ರೀ ವೇಷದಾರಿ ಎಲ್ಲ ಪಾತ್ರಗಳಲ್ಲಿ ಬೇಕಾದ ಭಾವ, ನೃತ್ಯಗಳು ಯಕ್ಷಗಾದನಲ್ಲಿ ಹೆಚ್ಚು ಮಹತ್ವವನ್ನು ಹೊಂದಿದೆ. ಲಯಭರಿತವಾದ ಹಾಡುಗಳು ಅದಕ್ಕೆ ಬೇಕಾದ ಅಂಗವಿನ್ಯಾಸ ಪಾತ್ರಗಳಿಗೆ ಹೆಚ್ಚು ಆಕರ್ಷಣೆಯನ್ನು ನೀಡುತ್ತವೆ. ಶೃಂಗಾರ, ಹಾಸ್ಯ, ವೀರ, ರೌದ್ರ ಭಾವಗಳಿಗೆ ಬೇಕಾದ ನೃತ್ಯ ಇವೆಲ್ಲವೂ ಯಕ್ಷಗಾನದಲ್ಲಿ ಅತಿಹೆಚ್ಚಿನ ಮನರಂಜಕವಾಗಿಸಿದೆ. ಯಕ್ಷಗಾನ ಎಲ್ಲ ಪ್ರಸಂಗಗಳು ಅತಿ ಹೆಚ್ಚು ಕಳೆಕಟ್ಟುವುದು ರಾಕ್ಷಸ ಮತ್ತು ಖಳನಾಯಕ ಪಾತ್ರಗಳಿಂದ ಅವರ ಹಾವಭಾವ, ನೃತ್ಯ ಇವೆಲ್ಲವೂ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿರುತ್ತದೆ.

ಯಕ್ಷಗಾನ ಅದರ ಹೆಸರೇ ಹೇಳುವಂತೆ ಒಂದು ಸಂಗೀತ ವಿಧಾನ. ಪ್ರಸಿದ್ಧ ರಾಗಸಂಯೋಜನೆಗಳಿಂದ ಇದು ಜಾನಪದ ಕಲೆಯಂದಷ್ಟೇ ಹೇಳಲು ಸಾಧ್ಯವಿಲ್ಲ. ಇಲ್ಲನ ಅನೇಕ ಸಂಭಾಷಣೆಗಾರರು, ಕವಿಗಳು ವಿದ್ವತ್ತು ಹೊಂದಿರುವವರೇ ಆಗಿದ್ದಾರೆ. ಯಕ್ಷಗಾನದ ವಾದ್ಯಗಳನ್ನು ಈ ರೀತಿಯಾಗಿ ವಿಬಾಗಿಸಬಹುದು: ಚರ್ಮವಾದ್ಯ, ಲೋಹವಾದ್ಯ ಹಾಗೂ ತಂತಿವಾದ್ಯಗಳು. ಮದ್ದಳೆ ಮತ್ತು ಚಂಡೆ ಚರ್ಮವಾದ್ಯಗಳಾಗಿ, ತಾಳ ಮತ್ತು ಜಾಗಟೆಗಳು ಲೋಹವಾದ್ಯಗಳು, ತಂಬೂರಿ ತಂತಿವಾದ್ಯ. ಆಧುನಿಕ ದಿನಗಳಲ್ಲಿ ಹಾರ್ಮೋನಿಯಂ ಅನ್ನು ಶ್ರುತಿಗಾಗಿ ಬಳಕೆ ಮಾಡಲಾಗುತ್ತಿದೆ. ಇವುಗಳ ಜೊತೆಗೆ ಪಿಟೀಲು, ಕೊಳಲು, ಕ್ಲಾರಿಯೋನೆಟ್ ಗಳನ್ನು ಬಳಕೆ ಮಾಡಲಾಗುತ್ತಿದೆ.

ಯಕ್ಷಗಾನ ಪ್ರಸಂಗಗಳೆಲ್ಲ ಪೌರಾಣಿಕ ಕಥಾವಸ್ತುವನ್ನೇ ಹೊಂದಿರುತ್ತವೆ. ಕಾಳಗ ಅಥವಾ ಕಲ್ಯಾಣದ ವಸ್ತುವೇ ನೂರಕ್ಕೆ ತೊಂಬತ್ತೊಂಭತ್ತು ಭಾಗವಿದ್ದರೆ, ಉಳಿದಂತೆ ಅಲ್ಲೊಂದು ಇಲ್ಲೊಂದು ಮಹಾಪುರುಷರ ಮಹಾತ್ಮೆಯ ಕಥೆಗಳಿರುತ್ತವೆ. ರಾಮಾಯಣ, ಮಹಾಭಾರತ, ಪುರಾಣಗಳಿಂದ ವಸ್ತುಗಳನ್ನು ಕವಿಗಳು ಆರಿಸಿಕೊಂಡಿದ್ದಾರೆ. ಹಳಗನ್ನಡ ಕವಿಗಳಲ್ಲಿ ವಿಶೇಷವಾಗಿ ಷಟ್ಪದಿಕಾರರು ಯಕ್ಷಗಾನ ಕವಿಗಳಿಗೆ ಆಕರವಾಗಿದ್ದಾರೆ. ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿ ಮತ್ತು ತೊರವೆ ನರಹರಿಯಂತಹ ಕವಿಗಳ ಕಾವ್ಯದ ಪ್ರೇರಣೆಯಿಂದ ಅವರು ಕೃತಿ ರಚನೆಗೆ ತೊಡಗಿದವರು. ಎಲ್ಲಾ ಯಕ್ಷಗಾನಗಳಲ್ಲೂ ಕಾಳಗವಿದ್ದೇ ಇರಬೇಕು; ಪರಿಣಯಗಳೂ ಇವೆ, ಆದುದರಿಂದ ಜರಾಸಂಧನ ಕಾಳಗ, ಕೃಷ್ಣಾರ್ಜುನರ ಕಾಳಗ, ಭಸ್ಮಾಸುರನ ಕಾಳಗ,

ಕನಕಾಂಗಿ ಕಲ್ಯಾಣ, ದ್ರೌಪದಿ ಸ್ವಯಂವರ, ಗಿರಿಜಾ ಕಲ್ಯಾಣ-ಇಂಥ ಹೆಸರುಗಳೇ ಅಲ್ಲಿ ಜಾಸ್ತಿಯಾಗಿ ಕಂಗೊಳಿಸುತ್ತವೆ.

**ತಾಳಮದ್ದಲೆ**

ತಾಳಧಾರಿಗಳಾದ ಭಾಗವತರು ಮೃದಂಗ ವಾದನದ ಮೇಳವಿಟ್ಟುಕೊಂಡು ಆಖ್ಯಾನವನ್ನು ಹೇಳುವುದರಿಂದ ಇದಕ್ಕೆ 'ತಾಳ ಮದ್ದಳೆ' (ತಾಳಮದ್ದಲೆ) ಎಂಬ ಹೆಸರು ಬಂದಿದೆ ಎಂದು ಹೇಳುವರು. ಯಕ್ಷಗಾನದ ಮೊದಲ ಹಂತ ಈ ತಾಳಮದ್ದಳೆಯೆಂದು ಹೇಳುತ್ತಾರೆ. ನಾಲ್ಕಾರು ಜನ ಒಂದೆಡೆ ಸೇರಿಕೊಂಡು ಒಂದು ಕಥೆಯಲ್ಲಿನ ಬೇರೆ ಬೇರೆ ಪಾತ್ರಗಳ ಚಿತ್ರಣವನ್ನು ಪದ್ಯಗಳ ಆಧಾರದ ಮೇಲೆ ತಮ್ಮ ಪ್ರತಿಭೆಯಿಂದ ಮಾತಿನ ಮೂಲಕ ಚಿತ್ರಿಸುತ್ತ ಹೋಗುವರು. ಪುರಾಣ ಕತೆಗಳನ್ನು ಹೇಳುವುದರಿಂದ, ಕೇಳುವುದರಿಂದ ಪುಣ್ಯಪ್ರಾಪ್ತಿಯಾಗಿ, ಇಷ್ಟಾರ್ಥ ಸಿದ್ಧಿಯೂ ಆಗುವುದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಕಲೆ ಬೆಳೆದುಬಂದಿದೆ ಎನ್ನುತ್ತಾರೆ.

**ಗೊಂಬೆಯಾಟ**

ಜಗತ್ತಿನ ಪ್ರಾಚೀನ ಕಲಾ ಪ್ರಕಾರಗಳಲ್ಲಿ ಗೊಂಬೆಯಾಟ ಸಹ ಒಂದು. ಕೆಲ ವಿದ್ವಾಂಸರ ಪ್ರಕಾರ ಸಂಸ್ಕೃತ ನಾಟಕಗಳಿಗೆ ಗೊಂಬೆಯಾಟದ ಪ್ರೇರಣೆ ಇದೆ. ಗೊಂಬೆಯಾಟ ಯಾವ ದೇಶದಿಂದ ಬಂದಿದೆ ಇದರ ಮೂಲ ಯಾವುದು ಎಂದು ಹೇಳಲು ಸಾಧ್ಯವಾಗಿಲ್ಲ. ಆದರೆ ಕೆಲವು ಅಧ್ಯಾಯನಗಳ ಪ್ರಕಾರ ಪ್ರಾಚೀನ ಚೀನಿಯರ ಧಾರ್ಮಿಕ ವಿಧಿವಿಧಾನಗಳಲ್ಲಿ, ಭಾರತೀಯರ ಮಾಯಾ ವಿದ್ಯೆಗಳಲ್ಲಿ ಮತ್ತು ಈಜಿಪ್ಟ್ ಪಿರಮಿಡ್ ಗೋಡೆಗಳ ಮೇಲೆ ಗೊಂಬೆಗಳ ಚಿತ್ರ ಇರುವುದನ್ನು ಉಲ್ಲೇಖಿಸಿದೆ. ಗೊಂಬೆಯಾಟ ಹೆಸರಿಗೆ ಸಂಬಂಧಿಸಿದಂತೆ ಸೂತ್ರದ ಗೊಂಬೆ, ಬೊಂಬೆಯಾಟ ಇತ್ಯಾದಿ ಹೆಸರುಗಳು ರತ್ನಕರ ವರ್ಣಿ ಸೇರಿದಂತೆ ಕನಕದಾಸರ ಕಾವ್ಯಗಳಲ್ಲಿ ಮಾಹಿತಿ ಸಿಗುತ್ತದೆ. ಕ್ರಿ.ಶ. 1470, 1521ರ ಅನೇಕ ಶಾನಗಳಿಂದ ವಿಜಯನಗರ ಸಮಯಕ್ಕೆ ಗೊಂಬೆಯಾಟ ಅತಿ ಹೆಚ್ಚಿನ ಜನಪ್ರಿಯವಾದ ಪ್ರಕಾರ ಎಂದು ತಿಳಿದುಬರುತ್ತದೆ.

ಕನ್ನಡ ನಾಡಿನಲ್ಲಿ ಗೊಂಬೆಯಾಟವು ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಮತ್ತು ಉತ್ತರ ಕರ್ನಾಟಕದ ದೊಡ್ಡಾಟಗಳಿಂದಲೂ ಪ್ರೇರಣೆಗೊಂಡು ಬೆಳೆದಿದೆ. ಇಲ್ಲಿನ ಕಥನದ ವಸ್ತು ಯಕ್ಷಗಾನ ಮತ್ತು ದೊಡ್ಡಾಟಗಳ ಕಥನ ವಸ್ತುವೇ ಆಗಿದೆ. ಈ ಸೂತ್ರದ ಗೊಂಬೆಯಾಟವನ್ನು ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ದಾರವಾಡ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಪ್ರಚಾರವನ್ನು ಪಡೆದುಕೊಂಡಿದೆ. ಗೊಂಬೆಯಾಟಕ್ಕೆ ಒಂದು ಎತ್ತರದ ಜಗಲಿ ಅಥವಾ ವೇದಿಕೆಯ ಮೇಲೆ ರಂಗಸ್ಥಳವನ್ನು ಸಿದ್ಧಪಡಿಸುತ್ತಾರೆ. ವೇದಿಕೆಯ ಹಿಂಭಾಗದಲ್ಲಿ ಕಪ್ಪು ತೆರೆ ಇರುತ್ತದೆ. ಅದು ಗೊಂಬೆಗಳನ್ನು ಕುಣಿಸುವವರ ಕುತ್ತಿಗೆ ಮಟ್ಟಕ್ಕಿರುತ್ತದೆ. ಪರದೆಯ ಒಂದು ಪಕ್ಕದಲ್ಲಿ ಭಾಗವತನು ತನ್ನ ಹಿಮ್ಮೇಳದವರೊಂದಿಗೆ ಕುಳಿತಿರುತ್ತಾನೆ. ಗೊಂಬೆಗಳನ್ನು ಕುಣಿಸುವವರು ತಮ್ಮ ಎರಡೂ ಮುಂಗೈಗಳಲ್ಲಿ ಮತ್ತು ಹಲ್ಲುಗಳ ಮೂಲಕ ಸೂತ್ರ ಹಿಡಿದು ಗೊಂಬೆಗಳನ್ನು ನಿಯಂತ್ರಿಸುವರು. ಗೊಂಬೆಗಳು ಹಗುರ ಮರಗಳಿಂದ ಮಾಡಿದ್ದು ಒಂದೂವರೆ ಅಡಿಯಿಂದ ಎರಡೂವರೆ ಅಡಿಗಳೆತ್ತರವಿರುತ್ತವೆ. ಕಾಲು, ಕೈ, ತಲೆ, ಮುಂಡಗಳು ಪ್ರತ್ಯೇಕವಾಗಿದ್ದು ಅಲ್ಲಿಗೆಲ್ಲಾ ಪ್ರತ್ಯೇಕ ದಾರಗಳನ್ನು ಕಟ್ಟಿರುತ್ತಾರೆ. ಬೆರಳು, ತುಟಿಗಳಿಂದ ಸೂತ್ರಗಳನ್ನಿಡಿದು ಬೊಂಬೆಗಳನ್ನು ನಿರ್ಮಿಸಲಾಗಿರುತ್ತದೆ. ಬೊಂಬೆಗಳಿಗೆ ಬಣ್ಣ ಹಾಕಿ ವೇಷಭೂಷಣಗಳಿಂದ ಅಲಂಕರಿಸುವರು. ಈ ವೈವಿಧ್ಯಮಯ ಅಲಂಕಾರಗಳು ಪಾತ್ರಗಳಿಗುಣವಾಗಿರುತ್ತವೆ. ಸ್ತ್ರೀ, ದೇವತೆ, ರಾಕ್ಷಸ, ರಾಜ, ಸೇವಕರು, ವಿದೂಷಕ ಇತ್ಯಾದಿ ಪಾತ್ರಗಳನ್ನು ಈ ಗೊಂಬೆಯಾಟದಲ್ಲಿ ಗಮನಿಸಬಹುದು. ಹಿಂದಿರುವ ಸೂತ್ರದಾರಿಗಳ ಕೈಚಳಕದ ಮೂಲಕ ಗೊಂಬೆಗಳು ಚಲಿಸುತ್ತವೆ, ಕುಣಿಯುತ್ತವೆ, ಯುದ್ಧ ಮಾಡುತ್ತವೆ, ಆರತಿ ಇತ್ಯಾದಿಗಳ ಮೂಲಕ ನೋಡುಗರನ್ನು ಮೂಕಗವಿಸ್ಮಿತಗೊಳಿಸುತ್ತವೆ. ಕಾಲಿಗೆ ಗೆಜ್ಜೆ ಕಟ್ಟಿ ಗೊಂಬೆಗಳಿನುಸಾರ ಶಬ್ದ ಮಾಡುವ ಸೂತ್ರದಾರಿಗಳು ಗೊಂಬೆಗಳ ಪರವಾಗಿ ಸಂಬಾಷಣೆ ನಡೆಸುವರು ಅದಕ್ಕೆ ತಕ್ಕನಾಗಿ ಮದ್ದಳೆ ಬಾರಿಸುವರು. ಮದ್ದಳೆಗನುಗುಣವಾಗಿ ಬೊಂಬೆಗಳ ನರ್ತನ ಒಂದು ವೈವಿಧ್ಯಮಯ ಪ್ರದರ್ಶನವಾಗಿರುತ್ತದೆ.

**ತೊಗಲು ಬೊಂಬೆಯಾಟ**

ಪ್ರಾಚೀನ ಇತಿಹಾಸವುಳ್ಳ ಬೊಂಬೆಯಾಟದಲ್ಲಿ ತೊಗಲು ಬೊಂಬೆಯಾಟ ಅತ್ಯಂತ ಪ್ರಾಚೀನವಾದುದು. ಈ ಕಲೆಯು ಕರ್ನಾಟಕದಲ್ಲಿ ಕಿಳ್ಳೇಕ್ಯಾತರಿಂದ ಪ್ರಚಾರ ಪಡೆದುಕೊಂಡಿದೆ. ತೊಗಲುಬೊಂಬೆಗಳನ್ನು ನಿರ್ಮಿಸಲು ಚರ್ಮವನ್ನು ಸಂಸ್ಕರಿಸಿ ಅವುಗಳ ಮೇಲೆ ಚಿತ್ರಗಳನ್ನು ಬರೆಯಲಾಗುತ್ತದೆ. ನಂತರ ಅವುಗಳ ಆಕಾರಕ್ಕೆ ತಕ್ಕಂತೆ ಬಣ್ಣ ಹಚ್ಚಲಾಗುತ್ತದೆ. ತೊಗಲು ಬೊಂಬೆಗಳು ಹೆಚ್ಚು ತೆಳುವಾಗಿದ್ದು ತಲೆ, ಕೈಕಾಲು ಇತ್ಯಾದಿಗಳನ್ನು ಒಂದೊಂದರಂತೆ ಸೇರಿಸಲಾಗುತ್ತದೆ. ತೊಗಲು ಬೊಂಬೆಗಳು ಅವುಗಳ ಪಾತ್ರಕ್ಕನುಗುಣವಾಗಿ ಆರು ಅಡಿಗಳಿಂದ ಎರಡು ಅಡಿಗಳವರೆಗೆ ಇರುತ್ತದೆ. ಅದರಂತೆ ಕೈಕಾಲು ಮತ್ತು ದೇಹದ ಇತರ ಭಾಗಗಳಿಗೆ ಸಣ್ಣ ಕೋಲುಗಳನ್ನು ಸೇರಿಸುತ್ತಾರೆ. ಬಿಳಿಯ ಪರದೆ ಹಿಂದೆ ಗೊಂಬೆಗಳನ್ನು ಹಿಡಿದ ಅದಕ್ಕೆ ಬೇಕಾದ ಬೆಳಕನು ಹಚ್ಚಿರುತ್ತಾರೆ. ಈ ಬೊಂಬೆಗಳ ಚಲನವಲನಗಳಿಗೆ ಪೂರಕವೆಂಬಂತೆ ಪರದೆಗೂ ಹಣತೆ(ಬೆಳಕಿಗೂ) ಇವುಗಳ ಮಧ್ಯದಲ್ಲಿ ತೊಗಲು ಗೊಂಬೆಗಳನ್ನು ತಂದು ನಿಲ್ಲಿಸಿ ಮೂಡುವ ನೆರಳಿನಾಟವೇ ತೊಗಲುಬೊಂಬೆಯಾಟ. ಬಣ್ಣ, ವಿನ್ಯಾಸ, ಉಡುಗೆ ತೊಡುಗೆಗಳ ಜೊತೆಗೆ ರಚನೆ, ಜೀವ ತುಂಬಿದ ರೀತಿಯಲ್ಲಿ ಅವುಗಳ ನಡೆದಾಡುವಿಕೆ, ಇವುಗಳಲ್ಲಿ ಹೆಚ್ಚು ಸೂಕ್ತವಾದ ರೀತಿಯ ಹಿಮ್ಮೇಳದ

ಸಂಭಾಷಣೆ, ಹಾಡು ವಾದ್ಯಗೋಷ್ಠಿ ಎಲ್ಲವು ನೋಡುಗನನ್ನು ಬೆರಗುಗೊಳಿಸುತ್ತದೆ. ಗೊಂಬೆಗಳಿಗೆ ಕೆಂಪು, ಕಪ್ಪು ಮತ್ತು ತಿಳಿನೀಲಿಯ ಬಣ್ಣಗಳನ್ನು ಬಳಿಸಿರುತ್ತಾರೆ.

ಯಕ್ಷಗಾನ ಮತ್ತು ದೊಡ್ಡಾಟಗಳ ಕಥಾನಕವನ್ನು ಬೊಂಬೆಯಾಟಕ್ಕೆ ಬಳಸಲಾಗುತ್ತದೆ. ಆದರೆ ಇಲ್ಲಿನ ಪ್ರಯೋಗ ವಿಧಾನ ಮಾತ್ರ ಹೆಚ್ಚಿನದಾಗಿ ಗೊಂಬೆಯಾಟದಂತೆ ಇರುತ್ತದೆ. ಈ ತೊಗಲುಬೊಂಬೆಯಾಟವನ್ನು ವೃತ್ತಿಪರ ಕಲಾವಿದರು ಆಶ್ರಿಸಿದ್ದು ಕಿಳ್ಳೇಕೇತ ಇಡೀ ಕುಟುಂಬ ಇದೆ ಕೆಲಸವನ್ನು ಮಾಡುತ್ತಿದ್ದಾರೆ. ಕಿಳ್ಳೇಕೇತ ಕುಟುಂಬಗಳ ಗಂಡಸರು ಗಂಡುಪಾತ್ರವನ್ನು, ಸ್ತ್ರೀಯರು ಸ್ತ್ರೀ ಮಾತ್ರವನ್ನು ಮತ್ತು ಮಕ್ಕಳು ಮಕ್ಕಳ ಪಾತ್ರಗಳನ್ನು ನಿಭಾಯಿಸುವುದರ ಜೊತೆಗೆ ಅವುಗಳಿಗೆ ಬೇಕಾದ ಸಂಭಾಷನೆಯನ್ನು ನೀಡುತ್ತಾರೆ. ಇವು ಬಹುತೇಕ ಕೋಲಾರ, ಚಿತ್ರದುರ್ಗ, ಮಂಡ್ಯ ಜಿಲ್ಲೆಗಳಲ್ಲಿ ಜನಪ್ರಿಯವಾಗಿವೆ.

**ದೊಡ್ಡಾಟ**

ಮೂಡಲಪಾಯ ಎಂಬ ಹೆಸರೇ ಹೇಳುವಂತೆ ಪೂರ್ವದಿಕ್ಕಿನ ಬಯಲಾಟವಾಗಿದೆ. ಪಶ್ಚಿಮದಲ್ಲಿ ಯಕ್ಷಗಾನವಾದರೇ ಪೂರ್ವದಲ್ಲಿ ಮೂಡಲಪಾಯ ಇರುವುದನ್ನು ಗಮನಿಸಬಹುದು. ಇವೆರಡು ಒಂದೇ ಮೂಲವಾದರು ಇವುಗಳ ಭಿನ್ನ ಪ್ರಭಾವಗಳಿಂದ ಬೇರೆಬೇರೆಯಾಗಿವೆ. ಮೂಡಲಪಾಲ ಮತ್ತು ದೊಡ್ಡಾಟ ಎರಡು ಒಂದೇ ಆಗಿದ್ದು ಇತ್ತೀಚಿನ ದಿನಗಳಲ್ಲಿ ದೊಡ್ಡಾಟ ಎಂಬ ಹೆಸರು ಹೆಚ್ಚು ಪ್ರಚಲಿತವಾಗಿದೆ. ಅಂದರೆ ಉತ್ತರ ಕರ್ನಾಟಕದ ಬಯಲಾಟದಂತೆ ಹೊಸಮಾದರಿ ಸಣ್ಣಾಟಗಳು ಪ್ರಾರಂಭವಾಗುತ್ತವೆ. ಮೂಲದಲ್ಲಿ ಬಯಲಾಟವನ್ನು ದೊಡ್ಡಾಟವೆಂದು ಕರೆಯುತ್ತಾರೆ. ದೊಡ್ಡಾಟದಲ್ಲಿ ಬಯಲಾಟ ತೀರಾ ಪ್ರಾಚೀನವಾಗಿದ್ದು ಯಕ್ಷಗಾನವು ಕಥಕ್ಕಳಿಯಿಂದ ಪ್ರಭಾವಗೊಂಡು ವ್ಯವಸ್ಥಿತ ಬದಲಾವಣೆ ಮಾಡಿಕೊಂಡಿದೆ. ಆದರೆ ದೊಡ್ಡಾಟ ಮತ್ತು ಯಕ್ಷಗಾನದ ಕಥಾವಸ್ತುಗಳು ಒಂದೇಯಾದರು ಯಕ್ಷಗಾನ ವೈಷ್ಣವ ಪರಂಪರೆಯ ವಿಷ್ಣುವಿನ ಕಥೆಗಳಾದರೆ ದೊಡ್ಡಾಟದಲ್ಲಿ ಶಿವ ಮತ್ತು ವಿಷ್ಣುವಿನ ಕಥೆಗಳಳನ್ನು ಸಮಾನವಾಗಿ ಬಳಸುತ್ತಾರೆ. ಅದೇ ರೀತಿ ರಂಗದ ಪ್ರದರ್ಶನದಲ್ಲಿ ಸ್ತುತಿ, ವರ್ಣನೆ ಮತ್ತು ಕುಣಿತಗಳ ಮೂಲಕ ಇವೆರಡರಲ್ಲಿ ಸಾಕಷ್ಟು ಬದಲಾವಣೆ ಇದೆ. ದೊಡ್ಡಾಟ ಜಾನಪದಕ್ಕೆ ಹತ್ತಿರವಿದ್ದರೆ ಯಕ್ಷಗಾನ ನಯವಂತಿಕೆಯನ್ನು ಪಡೆಯುತ್ತದೆ. ದೊಡ್ಡಾದ ಕುಣಿತ, ವೇಷ, ಮುಖ ಬಣ್ಣ ಇವೆಲ್ಲವು ಹೆಚ್ಚು ನಾಜೂಕಿಲ್ಲದಿದ್ದರು ಕುಣಿತದಲ್ಲಿ ರೌದ್ರುತೆಯೇ ಹೆಚ್ಚು ಪ್ರಮುಖ ವಸ್ತುವಾಗಿರುತ್ತದೆ.

ದೊಡ್ಡಾಟದಲ್ಲಿ ನಾಯಕ ಮಾತ್ರವೇ ಹೆಚ್ಚು ಸ್ವಾತಂತ್ರವನ್ನು ಹೊಂದಿರುತ್ತಾನೆ. ಸಣ್ಣಾಟದಲ್ಲಿನ ಪಾತ್ರಗಳಲ್ಲಿ ಹೆಚ್ಚಿನ ಸ್ವಾತಂತ್ರವಿರುತ್ತದೆ. ದೊಡ್ಡಾಟದ ಸಂಭಾಷಣೆಗಳು ಪೂರ್ವಸಿದ್ಧವಾಗಿದ್ದು ಪ್ರಾಸಬದ್ಧವಾಗಿರುತ್ತದೆ. ಇಲ್ಲಿನ ಪಾತ್ರದಾರಿಗಳು ಬಹುತೇಕ ಅವಿದ್ಯಾವಂತರೇ ಇದ್ದು ಅವರೆಲ್ಲ ಸಂಭಾಷಣೆಗಳನ್ನು ಉರಿಹಚ್ಚಿ ಅಭ್ಯಾಸ ಮಾಡುತ್ತಾರೆ. ಇದರ ಸಂಭಾಷಣೆಯನ್ನು ಬರೆದ ಕವಿಗಳು ಪ್ರಮುಖವಾಗಿ ಬಳ್ಳಾರಿಯ ಹಂಪಿ ಸುತ್ತಲಿನವರು ಎಂದು ತಿಳಿದುಬಂದಿದ್ದು ಇದಕ್ಕೆ ಸಂಬಂಧಿಸಿದ ಇನ್ನಷ್ಟು ಅಧ್ಯಯನ ನಡೆಯಬೇಕಿದೆ.

**ಸಣ್ಣಾಟ**

ಸಣ್ಣಾಟ ಬೆಳಗಾವಿ, ವಿಜಾಪುರ, ಧಾರವಾಡ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಹುಟ್ಟಿಬೆಳೆದಿದೆ. ದೊಡ್ಡಾಟಕ್ಕಿಂತ ಸಣ್ಣಾಟ ಅದರ ರಚನೆಯಲ್ಲಿ ಸರಳತೆಯನ್ನು ಕಾಣಬಹುದು. ಸಣ್ಣಾಟಗಳಲ್ಲಿ ವಿವಾಹಿತ ಗಂಡು-ಹೆಣ್ಣಿನ ಸಮಸ್ಯೆ, ಪ್ರೇಮ-ಕಾಮಗಳಿಗೆ ಸಂಬಂಧಿಸಿದ ಕಥಾವಸ್ತುಗಳನ್ನು ಹೊಂದಿರುತ್ತವೆ. ಜನರಿಗೆ ಹತ್ತಿರವಿರುವ ಸಾಮಾನ್ಯ ಕಥೆಯ ವಸ್ತುಗಳನ್ನು ಹೊಂದಿರುತ್ತವೆ. ಸಾಮಾಜಿಕ ಹಾಗೂ ನೈತಿಕ ಉದ್ದೇಶಗಳು ಮುಖ್ಯವಾದವು.

ಸಣ್ಣಾಟಗಳಲ್ಲಿ ಭಕ್ತಿ ಪ್ರಧಾನ ಪಾತ್ರವನ್ನು ನಿರ್ವಹಿಸುವ ಮೂಲಕ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಇದೊಂದು ಮಹತ್ತರ ಘಟ್ಟವಾಗಿದೆ. ಹನ್ನೆರಡರಿಂದ ಇಪ್ಪತ್ತರ ವರೆಗೆ ತನ್ನ ಪ್ರಭಾವವನ್ನು ಹೊಂದಿದ ಸಣ್ಣಾಟದಲ್ಲಿ ಎರಡು ಪ್ರಮುಖ ಪಂಥಗಳಿದ್ದು ಒಂದು ಶಿವಶರಣರ ಶೈವಪಂಥ ಮತ್ತೊಂದು ವೈಷ್ಣವದಾಸರ ದಾಸಪಂಥ. ಸಣ್ಣಾಟವು ಚಿಕ್ಕದಾದ ಹದಿನಾರು ಮೊಳ ಉದ್ದ, ಹನ್ನೆರಡು ಮೊಳ ಅಗಲ, ನಾಲ್ಕು ಮೊಳ ಎತ್ತರದ ವೇದಿಕೆಯಾಗಿದೆ. ದೊಡ್ಡಾಟದ ಅವಧಿಯನ್ನು ಹೊಲಿಸಿದರೆ ಸಣ್ಣಾಟದ್ದು ಕಡಿಮೆ. ದಾಸರಾಟ ಒಂದು ನಿರ್ದಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದಾಗಿದೆ. ಜಾತ್ರೆ, ಉತ್ಸವ ಇತ್ಯಾದಿ ಧಾರ್ಮಿಕ ಆಚರಣೆಗಳಲ್ಲಿ ಹಣ ನೀಡಿ ಆಡಿಸುತ್ತಾರೆ. ಶೈವಪಂಥ ಸಣ್ಣಾಟವನ್ನು ಶರಣರಾಟ, ಕಾದರಳ್ಳಿಯ ಆಟ, ದಪ್ಪಿನಾಟ ಎಂದೆಲ್ಲ ಕರೆಯುತ್ತಾರೆ. ಇವುಗಳ ಹಿಮ್ಮೇಳದಲ್ಲಿ ಮೂವರಿರುತ್ತಾರೆ. ಭಾಗವತನೇ ಕಥೆಗಾರ ಇಲ್ಲಿ ಹಾಡುಗಾರಿಕೆ ವಿಶೇಷವಾಗಿರುತ್ತದೆ.

ಕನ್ನಡ ಜನಪದ ರಂಗಭೂಮಿ ಧಾರ್ಮಿಕ ಆರಾಧನೆಗಳಿಗೆ ಸಂಬಂಧಿಸಿದೆ. ಇಲಿನ ಕುಣಿತಗಳು ಬಹುಬಗೆಯ, ವೇಷದಾರಿಯರು, ಜಾತಿಗಳ ಮೂಲಕ ವೃತ್ತಿ ನಿರತರಾದವರೇ ಆಗಿದ್ದಾರೆ. ಬೊಂಬೆಯಾಟ ಕನ್ನಡ ನೆಲದ ಪ್ರಾಚೀನ ಕಲೆಯಾಗಿ ಅಸ್ತಿತ್ವ ಪಡೆದುಕೊಂಡಿರುವುದರಲ್ಲಿ ಸಂದೇಹವಿಲ್ಲ. ಆದರಿಂದ ಅದು ರಂಗಭೂಮಿಯನ್ನು ಪ್ರವೇಶ ಮಾಡಿ ತನ್ನದೇ ಸ್ಥಾನವನ್ನು ಪಡೆದುಕೊಂಡಿದೆ. ನಮ್ಮಲ್ಲಿ ಗೊಂಬೆಗಳು ಮನುಷ್ಯರಂತೆ ಪ್ರಾಣಿ ಗೊಂಬೆಗಳು ತಮ್ಮ ಸ್ಥಾನವನ್ನು ಪಡೆದುಕೊಂಡಿವೆ. ಇವುಗಳ ಹಿನ್ನೆಲೆಯಲ್ಲಿ ರೂಪ ಪಡೆದ ಬಯಲಾಟದ ಹಾದಿ ಸ್ಪಷ್ಟವಾಗಿಲ್ಲ. ಸುತ್ತಲ ಪ್ರಾದೇಶಿಕತೆಯ ಪ್ರಭಾವ, ಭಿನ್ನತೆ, ಶೈವ-ವೈಷ್ಣವ

ಧಾರ್ಮಿಕ ಪಥಗಳ ಸಂಘರ್ಷ, ಸಂಸ್ಕೃತ ನಾಟಕಗಳ ಪ್ರಭಾವ ಇವೆಲ್ಲವೂ ಸೇರಿ ಬಯಲಾಟ ರೂಪ ಪಡೆದು ಹಲವು ಪ್ರಕಾರಗಳಿಗೆ ಕಾರಣವಾಗಿದೆ.

**ಪರಾಮರ್ಶನ ಗ್ರಂಥಗಳು:**


- ಕೆ. ಶಿವರಾಮ ಕಾರಂತ, ಯಕ್ಷಗಾನ
- ಚಂದ್ರಶೇಖರ ದಾಮ್ಲೆ, ಯಕ್ಷಗಾನ ರಂಗಭಾಷೆ
- ಬಿ. ಬಿ.ಹೆಂಡಿ, ಜಾನಪದ ಸಾಹಿತ್ಯ ದರ್ಶನ-1
- ಎಂ. ಎಸ್. ಸುಂಕಾಪುರ, ಜಾನಪದ ಸಾಹಿತ್ಯದರ್ಶನ-2
- ಬಿ. ಎಸ್. ಗದ್ದಗಿಮಠ, ಕನ್ನಡ ಬಯಲಾಟ, ಕನ್ನಡಸಾಹಿತ್ಯ ಪರಿಷತ್ತು
- Wikipedia ಮತ್ತು ಇತರೆ ಆನ್‌ಲೈನ್ ಲೇಖನಗಳನ್ನು ಬಳಿಸಿಕೊಂಡಿರುತ್ತೇನೆ